ಒ.ಎಸ್.ನಂ. 5/2014
ಪಿ. ಡಬ್ಲು. 1

ದಿನಾಂಕಃ 23.01.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ನ್ಯಾಯಾಲಯದ ಅನುಮತಿ ಮೆರೆಗೆ ಮುಂದೂವರೆದ

ಪಾಟೆಸವಾಲು: ಶ್ರೀ.ಎ.ಪಿ.ಕೆ. ವಕೀಲರಿಂದ **2** ನೇ ಪ್ರತಿವಾದಿ ಪರವಾಗಿ.

ದಾವಾ ಆಸ್ತಿ ಸಿಟಿಎಸ್ ನಂ. 5222/7 ಇದು ಖುಲ್ಲಾ ಜಾಗೆ ಇರುತ್ತದೆ. ಸುಶೀಲಾಬಾಯಿ ಈಕೆಯು ತಾನು ಖರೀದಿ ಮಾಡಿರುವ ಆರ್.ಎಸ್.ನಂ. 48 ರಲ್ಲಿ ಪ್ಲಾಟ ನಂ. 24 ನ್ನು ನಾಗೇಶ ಇವರಿಗೆ ಕೊಟ್ಟು ಸಿಟಿಎಸ್ ನಂ. 5222/7 ನ್ನು ತಮ್ಮ ಹೆಸರಿಗೆ ನೋಂದಾಯಿತ ಪತ್ರದ ಮುಖಾಂತರ ಅದಲು ಬದಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಅಣ್ಣ ಗೋಪಾಲ ಇವರ ಮಗಳು ಇರುತ್ತಾಳೆ ಎಂದರೆ ಸರಿ. ಸುಶೀಲಾಬಾಯಿ ಜೀವಂತ ಇರುವಾಗ ನನ್ನ ಅಣ್ಣ ಗೋಪಾಲ ಜೊತೆ ವಾಸ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ಆಕೆಯು ನನ್ನ ಹತ್ತಿರ ಇರುತ್ತಿದ್ದಳು. ಗೋಪಾಲ ತೀರಿಕೊಂಡ ನಂತರ ಸುಶೀಲಾಬಾಯಿ 2 ನೇ ಪ್ರತಿವಾದಿಯ ಹತ್ತಿರ ಇರುತ್ತಿದ್ದಳು ಎಂದರೆ ಸರಿಯಲ್ಲ.

ದಿ: 24.03.2008 ರಂದು ಸುಶೀಲಾಬಾಯಿ ಇವರು ತನ್ನ ಜೀವಿತ ಕಾಲದಲ್ಲಿ 2 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಸಂಬಂಧ ಒಂದು ಮೃತ್ಯುಪತ್ರ ಬರೆದು ಇಟ್ಟಿರುತ್ತಾರೆಂದರೆ ಸರಿಯಲ್ಲ. ಇದನ್ನು ತಿಳಿದು ನಾನು ಮತ್ತು 1 ನೇ ಪ್ರತಿವಾದಿ ಸುಶೀಲಾಬಾಯಿ ಇವರಿಗೆ ಮೃತ್ಯುಪತ್ರವನ್ನು ಏಕೆ ಬರೆದಿರುತ್ತೀ ಅಂತ ಒತ್ತಡ ಹಾಕುತ್ತಿದ್ದೇವು ಎಂದರೆ ಸರಿಯಲ್ಲ. ತನ್ನ ಹೆಸರಿಗೆ ಇದ್ದ ಪ್ಲಾಟನ್ನು ನೀಡಿ ಸಿಟಿಎಸ್ ನಂ. 5222/7 ನೇದ್ದನ್ನು ತನ್ನ ಹೆಸರಿಗೆ ಮಾಡಿಕೊಂಡ ಬಗ್ಗೆ ಸುಶೀಲಾಬಾಯಿ ಈಕೆಯು ದಿ: 20.07.2009 ರಂದು ಮುಂದುವರೆ ಮೃತ್ಯುಪತ್ರ ಸಹ ಬರೆದಿರುತ್ತಾರೆ ಎಂದರೆ ಸರಿಯಲ್ಲ ಸದರಿ ಎರಡೂ ಮೃತ್ಯುಪತ್ರಗಳನ್ನು ಸುಶೀಲಬಾಯಿ ತೀರಿಕೊಂಡ ನಂತರ ದಿ 07.10.2011 ರಂದು ನೋಂದಣಿ ಮಾಡಿಸಲಾಗಿದೆ ಎಂದರೆ ಸರಿಯಲ್ಲ. ಸುಶೀಲಬಾಯಿ ಬರೆದು ಇಟ್ಟ ಮೃತ್ಯುಪತ್ರಗಳ ಪ್ರಕಾರ 2 ನೇ ಪ್ರತಿವಾದಿಯೇ ದಾವಾ ಆಸ್ತಿಯ ಮಾಲಿಕಳು ಮತ್ತು ಕಬ್ಜೆದಾರಳು ಇರುತ್ತಾಳೆಂದರೆ ಸರಿಯಲ್ಲ.

ಸಿಟಿಎಸ್ ನಂ. 5325 ಇದರ ವಿಸ್ತೀರ್ಣ ಅಂದಾಜು 70X80 ಚದರ ಅಡಿ ಇರುತ್ತದೆ. ಅದರಲ್ಲಿ ಎಷ್ಟು ವಿಸ್ತೀರ್ಣದ ಕಟ್ಟಡ ಇರುತ್ತದೆ ಎಂದು ಹೇಳಲು ಬರುವುದಿಲ್ಲ. ಸದರಿ ಕಟ್ಟಡದಲ್ಲಿ ಒಟ್ಟು 23 ಕೊಣೆಗಳ ಪ್ರಶಾಂತ ಲಾಡ್ಜ ಹೆಸರಿನಲ್ಲಿ ನಡೆಸಲಾಗುತ್ತಿದೆ. ಲಾಡ್ಜನ ಮುಂದುಗಡೆ ಒಟ್ಟು ನಾಲ್ಕು ವಾಣಿಜ್ಯ ಮಳಿಗೆಗೆಗಳು ಇರುತ್ತವೆ ಎಂದರೆ ಸರಿ. ವಾಣಿಜ್ಯ ಮಳಿಗೆ ಹಾಗೂ ಲಾಡ್ಜನ ಕೆಳಗಡೆ [Underground] ಒಂದು ಹೊಟೆಲ್ ನಡೆಸುತ್ತಿದ್ದರು ಆದರೆ ಅದು ಈಗ ಬಂದ ಆಗಿರುತ್ತದೆ. ಪ್ರಶಾಂತ ಲಾಡ್ಜನ್ನು ಸಹ ಈಗ ಬಂದ ಮಾಡಲಾಗಿದೆ. ಹಾಗೆಂದು ಸುಳ್ಳು ನುಡಿಯುತ್ತಿದ್ಧೆನೆಂದರೆ ಸರಿಯಲ್ಲ. ಲಾಡ್ಜ ಹಾಗೂ ವಾಣಿಜ್ಯ ಮಳಿಗೆಗಳು 2 ನೇ

ಪ್ರತಿವಾದಿಯ ಕಬ್ಜೆಯಲ್ಲಿದ್ದು, ಆಕೆಯೇ ಲಾಡ್ಜನ್ನು ನಡೆಸುತ್ತಿದ್ದಾಳೆಂದರೆ ಸರಿಯಲ್ಲ.

ಸುಶೀಲಾಬಾಯಿ ತೀರಿಕೊಳ್ಳುವವರೆಗೆ ನಾನೇ ಲಾಡ್ಜ ನಡೆಸಿರುತ್ತೇನೆ. ನಂತರ ನನ್ನ ಹಾಗೂ ಅಣ್ಣ 1 ನೇ ಪ್ರತಿವಾದಿಯ ನಡುವೆ ಜಗಳವಾದ ಕಾರಣ ಲಾಡ್ಜನ್ನು ಬಂದ ಮಾಡಿರುತ್ತೇವೆ. ಲಾಡ್ಜ ಮುಂದುಗೆ ಇರುವ ಎರಡು ಮಳಿಗೆಗಳು ನನ್ನ ಹೆಸರಿಗೆ ಇರುತ್ತವೆ. ಮತ್ತು ಎರಡು ಮಳಿಗೆಗಳು 1 ನೇ ಪ್ರತಿವಾದಿಯ ಹೆಸರಿಗೆ ಇರುತ್ತವೆ. ಅವುಗಳನ್ನು ನಾವೇ ಬಾಡಿಗೆಗೆ ಕೊಟ್ಟಿರುತ್ತೇವೆ. ಹಾಗೆಂದು ಸುಳ್ಳು ನುಡಿಯುತ್ತಿದ್ಧೇನೆಂದರೆ ಸರಿಯಲ್ಲ. ಆಸ್ತಿಯ ಉತಾರನಲ್ಲಿ 1 ನೇ ಪ್ರತಿವಾದಿಯ ಹೆಸರು ಇದ್ದ ಕಾರಣ ಲಾಡ್ಜ ನಡೆಸಲು ಲೈಸನ್ಸನ್ನು ಅವರ ಹೆಸರಿಗೆ ನೀಡಲಾಗಿದೆ ಎಂದರೆ ಸರಿಯಲ್ಲ. ಆದರೂ ಸಹ 2 ನೇ ಪ್ರತಿವಾದಿಯೇ ಲೈಸನ್ಸ ಪಡೆದು ನಡೆಸುತ್ತಿದ್ದು, ಮುಂದೆ ಇರುವ ಮಳಿಗೆಗಳನ್ನು ಸಹ ಆಕೆಯೆ ಬಾಡಿಗೆಗೆ ಕೊಟ್ಟಿರುತ್ತಾಳೆಂದರೆ ಸರಿಯಲ್ಲ. ಆ ಆಸ್ತಿಗೆ ಸಂಬಂಧಪಟ್ಟ ನಳ, ವಿದ್ಯುತ್ ಬಿಲ್ಲನ್ನು 2 ನೇ ಪ್ರತಿವಾದಿಯೇ ಕಟ್ಟುತ್ತಿದ್ದಾಳೆಂದರೆ ಸರಿಯಲ್ಲ.

ಸುಶೀಲಬಾಯಿ ಈಕೆಯು ನನ್ನ ಹೆಸರಿಗೆ ದಾವಾ ಆಸ್ತಿ ಬಿಟ್ಟುಕೊಟ್ಟ ಬಗ್ಗೆ ಒಂದು ಮೃತ್ಯುಪತ್ರವನ್ನು ಬರೆದುಕೊಟ್ಟಿರುತ್ತಾರೆ ಈ ಕುರಿತು ನನ್ನ ವಿರುದ್ಧ 1 ನೇ ಪ್ರತಿವಾದಿ ಒಂದು ಕ್ರಿಮಿನಲ್ ಪ್ರಕರಣ ದಾಖಲು ಮಾಡಿರುತ್ತಾರೆಂದರೆ ಸರಿ ಮತ್ತು ಅದು ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಆದರೆ ಈ ದಾವೆಯಲ್ಲಿ ನಾನು ಆ ಮೃತ್ಯುಪತ್ರದ ಆಧಾರದ ಮೇಲೆ ಹಕ್ಕನ್ನು ಕೇಳುತ್ತಿಲ್ಲ. ಮನೆತನದ ವಂಶಾವಳಿಯನ್ನು ವಾದ ಪತ್ರದಲ್ಲಿ ನೀಡಿಲ್ಲ ಎಂದರೆ ಸರಿಯಲ್ಲ. ಹಾಗೆಂದು ಸುಳ್ಳು ನುಡಿಯುತ್ತಿದ್ಧೆನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಮತ್ತು 1 ನೇ ಪ್ರತಿವಾದಿಗೆ ಮಾತ್ರ ಹಕ್ಕು ಇರುತ್ತದೆ ಎಂದು ಸುಳ್ಳು ನುಡಿಯುತ್ತಿದ್ಧೆನೆಂದರೆ ಸರಿಯಲ್ಲ ಸುಶೀಲಬಾಯಿ ಬರೆದ ಮೃತ್ಯುಪತ್ರದ ಪ್ರಕಾರ 2 ನೇ ಪ್ರತಿವಾದಿಗೆ ಮಾತ್ರ ದಾವಾ ಆಸ್ತಿಗಳಲ್ಲಿ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರುವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.
ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ